**Date**: 07.11.2024 **O.S.No**. 08/2020

(**DW**–1)

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀಸವಾಲುಃ ಶ್ರೀ. ಎಸ್.ಐ.ಜಿ. ವಕೀಲರಿಂದಃ ವಾದಿಯರ ಪರಃ</u>

ವಾದಿ ಸುಭಾಶ್ ಪಾಟೀಲ ಈತನು ನನ್ನ ತಂದೆಯ ತಮ್ಮನಿರುತ್ತಾರೆ. ನಾನು ಡಿಪ್ಲೊಮೊ ಓದಿದ್ದೇನೆ. ನಾನು ಧಾರವಾಡದ ಆಟೋ ಮೊಬೈಲ್ ಕಾರ್ಪೊರೇಶನ್ ಆಫ್ ಗೋವಾ ಲಿ. ದಲ್ಲಿ ಕೆಲಸ ಮಾಡುತ್ತೇನೆ. ಈ ದಾವೆಯಲ್ಲಿ ನನ್ನ ತಂದೆ ಪ್ರತಿವಾದ ಪತ್ರ ದಾಖಲಿಸುವ ಮೊದಲು ವಕೀಲರಿಗೆ ಮಾಹಿತಿ ಕೊಡಲು ನನ್ನ ತಂದೆಯ ಜೊತೆ ನಾನು ಹೋಗಿರಲಿಲ್ಲ. ನನ್ನ ತಂದೆ ವಕೀಲರಿಗೆ ಯಾವ ಮಾಹಿತಿ ಕೊಟ್ಟಿದ್ದರು ಮತ್ತು ಯಾವ ದಾಖಲೆಗಳನ್ನು ನೀಡಿದ್ದರು ಅಂತ ನನಗೆ ಮಾಹಿತಿ ಇದೆ. ನನ್ನ ತಂದೆ ಪ್ರತಿವಾದ ಪತ್ರಕ್ಕೆ ಮಾಹಿತಿ ಕೊಡುವ ಕಾಲಕ್ಕೆ ಈ ದಾವೆದ ಆಸ್ತಿಗಳ ಬಗ್ಗೆ 2 ಮತ್ತು 3 ನೇ ಪ್ರತಿವಾದಿಯರು ಹಾಗೂ ಕುಮಾರ್ ಪಾಟೀಲ ಬರೆದುಕೊಟ್ಟ ಕ್ರಯ ಪತ್ರ ಮತ್ತು ವಾದಿ ಸುಭಾಶ್ ಪಾಟೀಲ ಇವರು ನನ್ನ ತಂದೆಯ ಹೆಸರಿಗೆ ಬರೆದುಕೊಟ್ಟ ಖರೀದಿ ಪತ್ರಗಳನ್ನು ವಕೀಲರಿಗೆ ಕೊಟ್ಟಿದ್ದರು. ಈ ದಾವೆಯಲ್ಲಿ ವಾದಿ ಸುಮಾರು 17 ಆಸ್ತಿಗಳನ್ನು ದಾವ ಸ್ವತ್ತುಗಳು ಅಂತ ತೋರಿಸಿದ್ದಾರೆ. ಖರೀದಿಯಾದ ಆಸ್ತಿಗಳು ಯಾವುವು ಮತ್ತು ಒಟ್ಟು ಕುಟುಂಬದ ಆಸ್ತಿಗಳು ಯಾವುವು ಅಂತ ನನಗೆ ಹೇಳಲು ಬರುತ್ತದೆ. ನನ್ನ ತಂದೆ ಖರೀದಿಸಿದ ಆಸ್ತಿಗಳೆಂದರೆ ಸ.ನಂ.3/2, ಕ್ಷೇತ್ರ 1 ಎಕರೆ, 20

ಗುಂಟೆ ಮತ್ತು ವಿಪಿಸಿ ನಂ.170 ಇರುತ್ತದೆ. ಉಳಿದ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಇವೆ. ನನ್ನ ಕಾಕ ಕುಮಾರ ಪಾಟೀಲ ಈತನು ಚಿಕ್ಕೋಡಿಯಲ್ಲಿ ಒಂದು ಆಸ್ತಿ ಖರೀದಿಸಿ ಮನೆ ಕಟ್ಟಿದ್ದಾನೆ, ಅದು ಆತನ ಸ್ವಂತ ಆಸ್ತಿ ಇರುತ್ತದೆ. ಸದರಿ ಕುಮಾರ್ ಪಾಟೀಲ ಇವರು ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು, ಅವರು ಈಗ ಮೃತ ಪಟ್ಟಿದ್ದಾರೆ. ಸದರಿ ಕುಮಾರು ಪಾಟೀಲ ಇವರು ಸುಮಾರು 35 ವರ್ಷ ಕೆಲಸ ಮಾಡಿದ್ದರು. ಸದರಿ ಕುಮಾರ್ ಪಾಟೀಲ ಇವರು ತಮ್ಮ ಕೆಲಸದಲ್ಲಿ ವರ್ಗಾವಣೆಯಾದ ಸ್ಥಳಗಳಿಗೆ ಹೋಗಿ ನೌಕರಿ ಮಾಡಿದ್ದಾರೆ ಎಂದರೆ ನಿಜ. ಆ ಕಾಲಕ್ಕೆ ಆತನ ಹೆಂಡತಿ-ಮಕ್ಕಳು ಆತನ ಜೊತೆ ನೌಕರಿ ಮಾಡುವ ಸ್ಥಳದಲ್ಲಿ ವಾಸ ಇದ್ದರು ಎಂದರೆ ನಿಜ. ಸದರಿ ಕುಮಾರ್ ಪಾಟೀಲ ಇವರು ಚಿಕ್ಕೋಡಿ, ನಿಪ್ಪಾಣಿ, ಅಥಣಿ, ಅಂಕಲಿ ಮತ್ತು ಬೆಳಗಾವಿಯಲ್ಲಿ ನೌಕರಿ ಮಾಡಿದ್ದಾರೆ. ಪೋಲಿಸ್ ಕೆಲಸದಲ್ಲಿ ಹಗಲು ರಾತ್ರಿ ಕರ್ತವ್ಯ ಮಾಡಬೇಕಾಗುತ್ತದೆ ಎಂದರೆ ನಿಜ.

ವಾದಿ ಸುಭಾಶ್ ಪಾಟೀಲ ಒಕ್ಕಲುತನ ಕೆಲಸ ಮಾಡುತ್ತಾನೆ ಎಂದರೆ ಸಾಕ್ಷಿ 2 ನೇ ಪ್ರತಿವಾದಿ ಒಕ್ಕಲುತನ ಮಾಡುತ್ತಿದ್ದರು ಅಂತ ಹೇಳುತ್ತಾರೆ. ವಾದಿ ಉಳ್ಳಾಗಡ್ಡಿ-ಖಾನಾಪೂರದಲ್ಲಿ ಇದ್ದು ಒಕ್ಕಲುತನ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಅವರು ಊರು ಬಿಟ್ಟು 25 ವರ್ಷ ಆಗಿದೆ ಅಂತ ಹೇಳುತ್ತಾರೆ. 2 ನೇ ಪ್ರಕಾಶ ಮೊದಲು ಕಡಹಟ್ಟಿಯಲ್ಲಿ ವಾಸ ಇದ್ದ ಎಂದರೆ ಸರಿಯಲ್ಲ. ಕಡಹಟ್ಟಿ ಹುಕ್ಕೇರಿ ತಾಲ್ಲೂಕಿನಲ್ಲಿದೆ,

ಅದು ಉಳ್ಳಾಗಡ್ಡಿ ಖಾನಾಪೂರದಿಂದ 35 ಕಿ.ಮೀ ದೂರದಲ್ಲಿದೆ. 2 ನೇ ಪ್ರತಿವಾದಿ ಪ್ರಕಾಶ ನಮ್ಮ ಒಟ್ಟು ಕುಟುಂಬದ ಮನೆಯಾದ ವಿಪಿಸಿ ನಂ.138ರಲ್ಲಿ ವಾಸ ಇರುತ್ತಾನೆ. ವಾದಿ ಸುಭಾಶ್ ಪಾಟೀಲ ಸಹ ಅದೆ ಮನೆಯಲ್ಲಿದ್ದ ಎಂದರೆ ನಿಜ.

3 ನೇ ಪ್ರತಿವಾದಿ ಸುರೇಶ ಪಾಟೀಲ ಈತನು ಮೊದಲು ರಾಯಬಾಗ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ. ನಂತರ ಮುನ್ನೊಳಿ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡಿದ್ದರು. 3 ನೇ ಪ್ರತಿವಾದಿ ರಾಯಬಾಗದಲ್ಲಿ ಸುಮಾರು 10 ವರ್ಷ ಕೆಲಸ ಮಾಡಿ ನಂತರ ಮುನ್ನೋಳಿಯಲ್ಲಿ ಕೆಲಸ ಮಾಡುವ ಕಾಲಕ್ಕೆ ನಿವೃತ್ತಿಯಾಗಿದ್ದಾರೆ. ಸುರೇಶನ ಹೆಂಡತಿ ಮಕ್ಕಳು ಆತನು ಕೆಲಸ ಮಾಡುವ ಕಾಲಕ್ಕೆ ಆತನ ಜೊತೆ ವಾಸ ಇದ್ದರು ಎಂದರೆ ನಿಜ, ಮಧ್ಯದಲ್ಲಿ 4-5 ವರ್ಷ ಉಳ್ಳಾಗಡ್ಡಿ ಖಾನಾಪೂರದಲ್ಲಿ ವಾಸ ಇದ್ದರು ಎಂದರೆ ನಿಜ. ನನ್ನ ಕಾಕಂದಿರಾದ 2 ಮತ್ತು 3 ನೇ ಪ್ರತಿವಾದಿಯರು ಹಾಗೂ ಮೃತ ಕುಮಾರ ಪಾಟೀಲ ಬೇರೆ ಬೇರೆ ಊರುಗಳಲ್ಲಿ ಕೆಲಸ ಮಾಡುತ್ತ ವಾಸವಿದ್ದ ಕಾಲಕ್ಕೆ ವಾದಿ ಮಾತ್ರ ಊರಲ್ಲಿದ್ದು, ವ್ಯವಸಾಯ ಮಾಡುತ್ತಿದ್ದ ಎಂದರೆ ಸಾಕ್ಷಿ ವಾದಿ ಮತ್ತು 2 ನೇ ಪ್ರತಿವಾದಿ ಇಬ್ಬರು ವ್ಯವಸಾಯ ಮಾಡುತ್ತಿದ್ದರು ಅಂತ ಹೇಳುತ್ತಾರೆ.

ನಾನು ಚಿಕ್ಕವನಿದ್ದಾಗ ನನ್ನ ತಾಯಿಯ ತಂದೆ ಮನೆ ಘಟಪ್ರಭಾದಲ್ಲಿ ಇದ್ದು, 5 ವರ್ಷ ಶಾಲೆ ಓದಿದ್ದೇನೆ, ನಂತರ 5 ವರ್ಷ ನಿಪ್ಪಾಣಿಯಲ್ಲಿ ನನ್ನ ಕಾಕ ಮೃತ ಕುಮಾರ

**Date**: 07.11.2024 **O.S.No**. 08/2020

(**DW**-1)

ಈತನ ಮನೆಯಲ್ಲಿ ಇದ್ದು 5 ವರ್ಷ ಶಾಲೆ ಓದಿದ್ದೇನೆ ನಂತರ, ಉಳ್ಳಾಗಡ್ಡಿ ಖಾನಾಪೂರದಿಂದ ನಿಡಸೋಸಿಗೆ ಹೋಗಿ-ಬಂದು ಮಾಡುತ್ತ ಶಾಲೆ ಓದಿದ್ದೇನೆ. ನಾನು ನಮ್ಮ ಕುಟುಂಬದಲ್ಲಿ ವ್ಯವಸಾಯ ಮಾಡಿಲ್ಲ ಎಂದರೆ ಸಾಕ್ಷಿ ನನ್ನ ತಂದೆ-ತಾಯಿ ವ್ಯವಸಾಯ ಮಾಡಿದ್ದಾರೆ ಅಂತ ಹೇಳುತ್ತಾರೆ. ವಾದಿ ಸುಭಾಶ ಮುಗ್ಧ ಸ್ವಭಾವದ ವ್ಯಕ್ತಿ ಇದ್ದು, ಹಗಲು-ರಾತ್ರಿ ಹೊಲದಲ್ಲೆ ದುಡಿಯುತ್ತಿದ್ದ ಎಂದರೆ ಸರಿಯಲ್ಲ. ನನ್ನ ತಂದೆ ಅಣ್ಣಗೌಡ ಪಾಟೀಲ 10 ನೇ ತರಗತಿ ಓದಿದ್ದಾರೆ, ನನ್ನ ತಂದೆ ಸೈನ್ಯದಲ್ಲಿ ನೌಕರಿ ಮಾಡುತ್ತಾರೆ, ಸುಮಾರು 20 ವರ್ಷದಿಂದ ನನ್ನ ತಂದೆ ಸೈನ್ಯದಲ್ಲಿದ್ದಾರೆ. ನನ್ನ ತಂದೆ ಸೈನ್ಯದಲ್ಲಿ ಇರುವುದರಿಂದ ವ್ಯವಸಾಯ ಮಾಡಿಲ್ಲ ಎಂದರೆ ನಿಜ. ವಾದಿಯ ಮಕ್ಕಳು ತನ್ನ ತಂದೆ ಜಮೀನಿನಲ್ಲಿ ವ್ಯವಸಾಯ ಮಾಡುವುದರಿಂದ ಅವರು ಸಹ ಬಹಳ ಶಾಲೆ ಓದದೆ ವ್ಯವಸಾಯ ಮಾಡುತ್ತಾರೆ ಎಂದರೆ ಸಾಕ್ಷಿ ಅವರು ಶಾಲೆ ಓದಿದ್ದಾರೆ ಅಂತ ಹೇಳುತ್ತಾರೆ. ವಾದಿಗೆ ಇಬ್ಬರು ಮಕ್ಕಳಿದ್ದಾರೆ, ಅವರಲ್ಲಿ ಒಬ್ಬರು ಸೈನ್ಯದಲ್ಲಿ ಸುಮಾರು 20 ವರ್ಷದಿಂದ ಕೆಲಸ ಮಾಡುತ್ತಿದ್ದಾರೆ, ಇನ್ನೊಬ್ಬ ಮಗ ಬಸ್ತವಾಡದಲ್ಲಿ ಇರುತ್ತಾರೆ, ಆತನು ಯಾವ ಕೆಲಸ ಮಾಡುತ್ತಾನೆ ಅಂತ ನನಗೆ ಗೊತ್ತಿಲ್ಲ.

ನನ್ನ ತಂದೆ ಸೈನ್ಯದಿಂದ 1990 ರಲ್ಲಿ ನಿವೃತ್ತಿ ಹೊಂದಿದ್ದಾರೆ. ನನ್ನ ತಂದೆ ಸೈನ್ಯದಿಂದ ರಜಕ್ಕೆ ಬಂದಾಗ ದಾವೆದ ಆಸ್ತಿಗಳ ಉತ್ಪನ್ನ ಎಲ್ಲ ತೆಗೆದುಕೊಂಡು

**Date**: 07.11.2024 **O.S.No**. 08/2020

(**DW**-1)

ಮನೆತನದ ವ್ಯವಹಾರ ಮಾಡುತ್ತಿದ್ದ ಎಂದರೆ ಸರಿಯಲ್ಲ. ನನ್ನ ಅಜ್ಜನ ಹೆಸರು ಪಾರೇಶಗೌಡ ಪಾಟೀಲ ಇರುತ್ತದೆ. ನನಗೆ ತಿಳುವಳಿಕೆ ಬಂದಾಗಿನಿಂದ ನನ್ನ ತಂದೆ ಮತ್ತು ಆತನ ಸಹೋದರರು ಬೇರೆ ಬೇರೆ ವಾಸ ಇದ್ದಾರೆ. ಆದರೆ ಒಟ್ಟು ಕುಟುಂಬದ ಆಸ್ತಿಗಳನ್ನು ಕೂಡಿ ಸಾಗು ಮಾಡುತ್ತಾರೆ, ಸ.ನಂ.3/2 ಮತ್ತು ವಿಪಿಸಿ ನಂ.170 ನನ್ನ ತಂದೆ ಮಾತ್ರ ಸಾಗು ಮಾಡುತ್ತಾರೆ. ನನ್ನ ತಂದೆ ಮತ್ತು ಆತನ 5 ಸಹೋದರರು ತಮ್ಮ ತಮ್ಮ ಅನುಕೂಲಕ್ಕೋಸ್ಕರ ದಾವೆದ ಆಸ್ತಿಗಳನ್ನು ಸಾಗು ಮಾಡುತ್ತ ಬಂದಿದ್ದು ಮತ್ತು ಬೇರೆಯವರಿಂದ ಸಾಗು ಮಾಡಿಸುತ್ತ ಬಂದಿದ್ದಾರೆ. ನನ್ನ ತಂದೆ ಹೆಸರಿನಲ್ಲಿ ಸಂಕೇಶ್ವರದ ಎಸ್.ಬಿ.ಐ ದಲ್ಲಿ ಒಂದು ಖಾತೆ ಇದೆ, ಬೇರೆ ಯಾವ ಬ್ಯಾಂಕಿನಲ್ಲಿ ನನ್ನ ತಂದೆಯ ಖಾತೆ ಇವೆ ಅಂತ ಗೊತ್ತಿಲ್ಲ. ನನ್ನ ತಂದೆಯ ಕೆಲಸದಿಂದ ಬಂದ ಹಣ ಅವರ ಬ್ಯಾಂಕಿಗೆ ಜಮಾ ಆಗುತ್ತಿತ್ತು. ದಾವೆದ ಪಿತ್ರಾರ್ಜಿತ ಸ್ವತ್ತುಗಳು ಫಲವತ್ತಾದ ಜಮೀನುಗಳು ಇದ್ದು, ಅವುಗಳಿಂದ ಸಾಕಷ್ಟು ಆದಾಯ ಬರುತ್ತಿತ್ತು ಎಂದರೆ ಸರಿಯಲ್ಲ. ದಾವೆದ ಆಸ್ತಿಯಲ್ಲಿ ಸುಮಾರು 7 ಎಕರೆ ಗುಡ್ಡ ಇರುತ್ತದೆ. ನಾನು ದಾವೆದ ಆಸ್ತಿಗಳ ಉತಾರ ನೋಡಿದ್ದೇನೆ. 7 ಎಕರೆ ಗುಡ್ಡ ಉಳ್ಳಾಗಡ್ಡಿ ಖಾನೂಪೂರದಲ್ಲಿ ಎರಡು ಕಡೆ ಇರುತ್ತವೆ, ಅನ್ನಗೋಳ ಗುಡ್ಡದ ಹತ್ತಿರ 3 ಎಕರೆ ಇದೆ, ಅದರ ಸ.ನಂ.104 ಇರುತ್ತದೆ. ಇನ್ನೊಂದು ಜಮೀನು ಬೇರೆ ಕಡೆ ಗುಡ್ಡದ ಹತ್ತಿರ ಇರುತ್ತದೆ. ಪಹಣಿಯಲ್ಲಿ ಬೆಳೆಯ ವಿವರ ಬರೆದಿರುತ್ತಾರೆ ಎಂದರೆ ನಿಜ. ಸದರಿ ಗುಡ್ಡದ ಜಮೀನಿನಲ್ಲಿ ಉತ್ಪನ್ನ ಬರುವುದಿಲ್ಲ, ದನಗಳಿಗೆ ಹಾಕಲು ಹುಲ್ಲು ಬೆಳೆಯುತ್ತಾರೆ. ದಾವೆದ ಆಸ್ತಿಗಳು ಎಲ್ಲಿ

**Date**: 07.11.2024 **O.S.No**. 08/2020

(**DW**-1)

ಇರುತ್ತವೆ ಮತ್ತು ಅವುಗಳ ಸರ್ವೆ ನಂಬರ್ ನನಗೆ ಗೊತ್ತು. ಅವುಗಳಲ್ಲಿ ಸ.ನಂ.202 ರಲ್ಲಿ 7 ಮತ್ತು 8 ಗುಂಟೆ, ಸ.ನಂ.145 ರಲ್ಲಿ 12 ಗುಂಟೆ, ಸ.ನಂ.126 ರಲ್ಲಿ 1 ಎಕರೆ, 34 ಗುಂಟೆ, ಸ.ನಂ.144 ರಲ್ಲಿ 14 ಗುಂಟೆ, 15 ಗುಂಟೆ ಹೀಗೆ ಸಣ್ಣ ಸಣ್ಣ ಕ್ಷೇತ್ರಗಳಿವೆ. ದಾವೆದ ಆಸ್ತಿಗಳು ಮಳೆಯಾಶ್ರಿತ ಜಮೀನು ಇರುತ್ತವೆ. ಸಣ್ಣ ಕ್ಷೇತ್ರ ಇರುವ ಜಮೀನುಗಳಲ್ಲಿ ಬೆಳೆ ಬೆಳೆಯುತ್ತೇವೆ. ದಾವೆದ ಆಸ್ತಿಗಳಲ್ಲಿ ಸೊಯಾಬಿನ ಮತ್ತು ಶೇಂಗ ಬೆಳೆಯುತ್ತೇವೆ. ದಾವೆದ ಆಸ್ತಿಗಳಿಂದ ಎಷ್ಟು ಆದಾಯ ಬರುತ್ತಿದೆ ಅಂತ ನನಗೆ ಹೇಳಲು ಬರುವುದಿಲ್ಲ. ನಮ್ಮ ಕುಟುಂಬ ಒಕ್ಕಲುತನ ಕುಟುಂಬದ ಎಂದರೆ ನಿಜ. ನಮ್ಮ ಕುಟುಂಬದಲ್ಲಿ ಎತ್ತು, ಚಕ್ಕಡಿ, ದನ-ಕರುಗಳು ಇದ್ದವು ಎಂದರೆ 25 ವರ್ಷಗಳ ಹಿಂದೆ ಇದ್ದವು ಅಂತ ಹೇಳುತ್ತಾರೆ.

<u>ಮುಂದುವರೆದ ಪಾಟೀಸವಾಲುಃ</u> ವಕೀಲರ ವಿನಂತಿ ಮೇರೆಗೆ ಮುಂದೂಡಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ
ಸಂಚಾರಿ ನ್ಯಾಯಾಲಯ ಸಂಕೇಶ್ವರ